# ವಾರ್ಷಿಕ ಪರೀಕ್ಷೆ–ಮಾದರಿ 3

## 10 ನೆಯತರಗತಿ – ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆ

**ಸಮಯ : 3.00 ಗಂಟೆಗಳು** **ಗರಿಷ್ಠ ಅಂಕಗಳು : 100**

**ಕೊಟ್ಟಿರುವ ಪ್ರಶ್ನೆಗಳಿಗೆ ಅಥವಾಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಸೂಕ್ತವಾದಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 6 × 1 = 6**

1. ಕೆಳಗಿನವುಗಳಲ್ಲಿ ಅನ್ವರ್ಥಕ ನಾಮಪದ
   ಅ) ಅರ್ಜುನ ಆ) ಗುಡ್ಡ ಇ) ವಿದ್ವಾಂಸ ಈ) ನಾನು
2. ವೃಕ್ಷದೊಳ್–ಪದದಲ್ಲಿರುವಕಾರಕಾರ್ಥ
   ಅ) ಕರಣ ಆ) ಸಂಪ್ರದಾನ ಇ) ಸಂಬಂಧ ಈ) ಅಧಿಕರಣ
3. ಇವುಗಳಲ್ಲಿ ಕರ್ಮಧಾರಯ ಸಮಾಸಕ್ಕೆಉದಾಹರಣೆ
   ಅ) ಮೋಸಮಾಡು ಆ) ಕಟ್ಟೇಕಾಂತ ಇ) ಅಂತಕಾತ್ಮಜ ಈ) ಸೂರ್ಯಚಂದ್ರರು
4. ಒಂದುಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆಅಧೀನವಾಗಿದ್ದರೆಅಂತಹ ವಾಕ್ಯವೇ
   ಅ) ಸಾಮಾನ್ಯವಾಕ್ಯ ಆ) ಸಂಯೋಜಿತ ವಾಕ್ಯ ಇ) ಮಿಶ್ರವಾಕ್ಯ ಈ) ಭಾವಸೂಚಕ ವಾಕ್ಯ
5. ಇವುಗಳಲ್ಲಿ ಅವಧಾರಣಾರ್ಥಕಾವ್ಯಯಕ್ಕೆಉದಾಹರಣೆ
   ಅ) ಸುಮ್ಮನೆ ಆ) ಭಳಿರೇ ಇ) ಉಂಟು ಈ) ಅದುವೇ
6. 'ದಿವಾನ' ಪದವು ಈ ಭಾಷೆಯಿಂದ ಬಂದಿದೆ.
   ಅ) ಪರ್ಷಿಯನ್ ಆ) ಅರಬ್ಬಿ ಇ) ಇಂಗ್ಲೀಷ್ ಈ) ಉರ್ದು

**ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ. 4× 1 = 4**

7. ದೇವಾಲಯ : ಸವರ್ಣದೀರ್ಘಸಂಧಿ : : ಅಜಂತ: ____________
8. ಸೂರ್ಯಚಂದ್ರ : ಜೋಡುನುಡಿ : : ಬೇಗ ಬೇಗ : ___________
9. ಕಾರ್ಯ : ಕಜ್ಜ : : ಕೊಡಲಿ : __________
10. ಅವರು : ಪ್ರಥಮ ಪುರುಷ : : ತಾಂ : ________

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿಉತ್ತರ ಬರೆಯಿರಿ. 7 × 1 = 7**

11. ಚಿತ್ರಕೂಟಎಲ್ಲಿದೆ?
12. ವಚನಕಾರರಿಗೆಯಾವುದುದೇವರಾಗಿತ್ತು?
13. ಶಾನುಭೋಗರಿಗೆತಲೆ ಸುತ್ತಲುಕಾರಣವೇನು?
14. ಧರ್ಮಬುದ್ಧಿಯುತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?
15. ನದೀ ಜಲಗಳು ಏನಾಗಿವೆ?
16. ಹಕ್ಕಿಯುಯಾರ ನೆತ್ತಿಯನ್ನುಕುಕ್ಕಿದೆ?
17. ಭಗತ್‌ಸಿಂಗ್ ಹುತಾತ್ಮನಾದುದುಯಾವಾಗ?

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10 × 2 = 20**

18. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?
19. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿಯು ನಿರಾಶೆಯಿಂದ ಹೇಳಿದ್ದೇನು?
20. ಲಕ್ಷ್ಮಣನುಅಣ್ಣನನ್ನು ಹೇಗೆ ಸಂತೈಸಿದನು?
21. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರುಏನೆಂದು ಹೇಳಿದ್ದಾರೆ?
22. ಪಾರ್ಥಭೀಮರ ಬಗೆಗೆ ದುರ್ಯೋಧನನಅಭಿಪ್ರಾಯವೇನು?
23. ವಾಲ್ಮೀಕಿಯಆಶ್ರಮಕ್ಕೆಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.

24. ವಿವೇಕಾನಂದರು ಇಂದಿಗೂ ಸತ್ಯ. ಏಕೆ?
25. ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?
26. ಭಗತ್‌ಸಿಂಗ್‌ನ ಉಪವಾಸಕ್ಕೆ ಕಾರಣವೇನು?
27. ಉಪ್ಪಿನ ವಿಶೇಷತೆಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ?

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಕೃತಿಗಳನ್ನು ಪರಿಚಯಿಸಿ, ವಾಕ್ಯರೂಪದಲ್ಲಿಟಿಪ್ಪಣಿ ಬರೆಯಿರಿ.**

28. "ಡಿ.ಎಸ್.ಜಯಪ್ಪಗೌಡ" **2 × 3 = 6**
29. "ರನ್ನ"

**ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1 × 3 = 3**

30. ಮೇದಿನಿಯಂಕ್ರಮಕ್ರಮದೆ ಪರ್ವಿದುದಾತ್ತನಭೋವಿಭಾಗಮಾ

**ಕೊಟ್ಟಿರುವ ವಾಕ್ಯದಲ್ಲಿರುವಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಿಸಿರಿ.** **1 × 3 = 3**

31. ಮಾರಿಗೌತಣವಾಯ್ತು ನಾಳಿನ ಭಾರತವು

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂಒಂದನ್ನು ವಿಸ್ತರಿಸಿ ಬರೆಯಿರಿ.** **1 × 3 = 3**

32. * ತಾಳಿದವನು ಬಾಳಿಯಾನು

**ಅಥವಾ**

* ಮನಸ್ಸಿದ್ದರೆ ಮಾರ್ಗ

**ಕೊಟ್ಟಿರುವ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6 × 3 = 18**

33. "ಯಾವಜೀವಿಯುಊತನ್ನಷ್ಟಕ್ಕೆತಾನಿಲ್ಲ"
34. "ಸೈತಾನ ಹಿಂತಿರುಗು"
35. "ಹಸಿಯದ ಬೇಹಾರಿಯೇಇಲ್ಲ"
36. "ಹೊಸ ಭರವಸೆಗಳ ಕಟ್ಟೋಣ"
37. "ಮಂಗಳಲೋಕದ ಅಂಗಳಕೇರಿ"
38. "ಅರಸುಗಳ ವಾಜಿಯಂ ಬಿಡು"

**ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1 × 4 = 4**

39. ಕೊಡಲಿ ______________ ಸಿಕ್ಕದ್ದು ______________
______________ ______________
______________ ಅಥವಾ ______________
______________ ನಾನೆಷ್ಟಾ ______________ಜನಕಾ

**ಕೊಟ್ಟಿರುವ ಪದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ.**

40. ಹಸುರಾಗಸ ಹಸುರು ಮುಗಿಲು;
ಹಸುರುಗದ್ದೆಯಾ ಬಯಲು!
ಹಸುರಿನ ಮಲೆ, ಹಸುರುಕಣಿವೆ;
ಹಸುರು ಸಂಜೆಯೀ ಬಿಸಿಲೂ!

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟುಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2 × 4 = 8**

41. * ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳೇನು?

**ಅಥವಾ**

* ವೆಸ್ಟ್‌ಮಿನ್‌ಸ್ಟರ್ ಅಬೆ ಪ್ರಾರ್ಥನಾ ಮಂದಿರಒಂದು ವಿಶೇಷ ಸ್ಮಾರಕ. ವಿವರಿಸಿ.

42. * ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು?

**ಅಥವಾ**

* ಕರ್ಣನ ನಿರ್ಧಾರ ಸರಿಯೆನ್ನುವಿರಾ? ಏಕೆ?

**ಕೊಟ್ಟಿರುವಗದ್ಯಭಾಗವನ್ನುಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **01×04 =04 (2+2)**

43. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ವಿಶಿಷ್ಟವಾದ ಕಾರ್ಯವನ್ನು ಮಾಡಿ 'ನೇತಾಜಿ' ಎಂದು ಸುಭಾಸ್‌ಚಂದ್ರಬೋಸರು ಹೆಸರು ಪಡೆದರು. 1897ರಲ್ಲಿ ಒರಿಸ್ಸಾರಾಜ್ಯದಕಟಕದಲ್ಲಿ ಜನಿಸಿದರು. ಸುಭಾಸರತಂದೆರಾಯ ಬಹದ್ದೂರ್‌ಜಾನಕೀನಾಥರು ಪ್ರಸಿದ್ಧ ವಕೀಲರಾಗಿದ್ದರು. ತಾಯಿ ಪ್ರಭಾವತಿಯವರುಉತ್ತಮಗೃಹಿಣಿ ಎನಿಸಿದ್ದರು. ಹದಿನಾಲ್ಕನೆಯ ಮಗನಾಗಿ ಜನಿಸಿದ ಸುಭಾಸ್‌ಚಂದ್ರಬೋಸರುಕಲ್ಕತ್ತೆಯ ಪ್ರೆಸಿಡೆನ್ಸಿ ಮಹಾವಿದ್ಯಾಲಯದಲ್ಲಿ ಬಿ.ಎ.ಪದವಿ ಪಡೆದುಇಂಗ್ಲೆಂಡಿಗೆ ಹೋಗಿ ಭಾರತೀಯ ನಾಗರಿಕ ಸೇವಾ ಪರೀಕ್ಷೆಯಲ್ಲಿಉತ್ತೀರ್ಣರಾದರು. ಭಾರತೀಯ ನಾಗರಿಕ ಸೇವಾ ಕಾರ್ಯಕ್ಕೆರಾಜೀನಾಮೆ ಸಲ್ಲಿಸಿ ಅಸಹಾಕಾರ ಚಳವಳಿಯಲ್ಲಿ ಭಾಗವಹಿಸಿದರು. ಪಶ್ಚಿಮ ಬಂಗಾಳದಲ್ಲಿ ಚಿತ್ತರಂಜನದಾಸರಜೊತೆಗೆ ಸೇರಿ ಅನೇಕ ಚಳವಳಿಗಳನ್ನು ನಡೆಸಿದರು. ಸಂಪೂರ್ಣ ಸ್ವಾತಂತ್ರ್ಯವೇ ನಮ್ಮಗುರಿಎಂದು ಘೋಷಿಸಿದರು.

ಪ್ರಶ್ನೆಗಳು :– 43) ಅ) ಸುಭಾಸರಕುಟುಂಬದ ಬಗ್ಗೆ ಬರೆಯಿರಿ.

ಆ) ಸುಭಾಸರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಿದ ಪಾತ್ರವೇನು?

44. ನಿಮ್ಮನ್ನುಬೇಲೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಜೀವಿತ/ಜಯಂತ್‌ಎಂದು ಭಾವಿಸಿಕೊಂಡು ಬೆಳೆ ನಷ್ಟದ ಪರಿಹಾರಕೋರಿ ಜಿಲ್ಲಾಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ. **1 × 5 = 5**

**ಅಥವಾ**

ನಿಮ್ಮನ್ನುಹಾಸನದಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿತನಿಷ್ಕ/ತರುಣ್‌ಎಂದು ಭಾವಿಸಿಕೊಂಡು ನಿಮ್ಮ ಶಾಲೆಯ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿ ಚಿಕ್ಕಬಳ್ಳಾಪುರದಲ್ಲಿರುವ ನಿಮ್ಮ ಗೆಳೆಯ ಅಥವಾ ಗೆಳತಿಗೆ ಒಂದುಒಂದು ಪತ್ರ ಬರೆಯಿರಿ:

45. **ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೊಂದು ವಿಷಯಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ:**

**1 × 5 = 5**

* ಬಾಹ್ಯಾಕಾಶದಲ್ಲಿ ಭಾರತದ ಸಾಧನೆ

**ಅಥವಾ**

* ಮಕ್ಕಳ ಹಕ್ಕುಗಳು